# ಉ.ಕ ಸಮಸ್ಯೆಗಳ ಚರ್ಚೆಗೆ 2 ದಿನ ನಿಗದಿ

## ಚಳಿಗಾಲ ಅಧಿವೇಶನ ಕುರಿತು ನ. 7ರಂದು ಪೂರ್ವಭಾವಿ ಸಭೆ

■ **ವಿಕ ಸುದ್ದಿಲೋಕ** ಮುಧೋಳ (ಬಾಗಲಕೋಟೆ)

ಬೆಳಗಾವಿ ಸುವರ್ಣ ಸೌಧದಲ್ಲಿ ಉತ್ತರ ಕರ್ನಾಟಕದ ಪ್ರಮುಖ ಸಮಸ್ಯೆಗಳ ಕುರಿತು ಎರಡು ದಿನಗಳ ಕಾಲ ಚರ್ಚಿಸಲು ಅವಕಾಶ ಕಲ್ಪಿಸಲಾಗುವುದು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ.

''ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಮೊದಲ ಆದ್ಯತೆ ನೀಡಲು ನಿರ್ಧರಿಸಲಾಗಿದೆ. ಚಳಿಗಾಲ ಅಧಿವೇಶನ ನಡೆಸುವ ಕುರಿತು ಸರಕಾರದ ಹೇಳಿಕೆ ಗಮನಿಸಿದ್ದೇನೆ. ನ.7ರಂದು ಬೆಳಗಾವಿಗೆ ತೆರಳಿ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್, ವಿಧಾನಮಂಡಲದ ಹಿರಿಯ ಅಧಿಕಾರಿಗಳು, ಜಿಲ್ಲಾಡಳಿತ ಜತೆಗೆ ಪೂರ್ವಭಾವಿ ಸಭೆ ನಡೆಸಲಾಗುತ್ತದೆ,'' ಎಂದು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.



■ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿಕೆ

**ಹೋರಾಟದ ಸ್ಥಳವಾಗದಿರಲಿ:** ''ಪ್ರಜಾಪ್ರಭುತ್ವದಲ್ಲಿ ಹೋರಾಟ, ಚಳವಳಿ ನಡೆಸುವುದು ಹಕ್ಕು. ಆದರೆ, ಗಮನ ಸೆಳೆಯಲು ಅದೇ ದೊಡ್ಡ ಪ್ರಮಾಣದಲ್ಲಿ ಅಸ್ತ್ರ ಆಗುತ್ತಿರುವುದರಿಂದ ವಿಧಾನ ಪರಿಷತ್‌ದಲ್ಲಿ ಚರ್ಚಿಸಲು ಸಮಯ ಕಡಿಮೆಯಾಗುತ್ತಿದೆ. ಉತ್ತರ ಕರ್ನಾಟಕಕ್ಕೆ ನ್ಯಾಯ ಸಿಗಬೇಕೆಂಬ ಉದ್ದೇಶದಿಂದಲೇ ಬೆಳಗಾವಿ ಅಧಿವೇಶನ ನಡೆಸಲಾಗುತ್ತಿದೆ. ಅದೊಂದು ಹೋರಾಟದ ಸ್ಥಳವಾಗಬಾರದು. ಸಮಸ್ಯೆ ಪರಿಹಾರಕ್ಕೆ ಅವಕಾಶ ದೊರೆಯಬೇಕೆಂದರೆ ಮೊದಲು ಉತ್ತರ ಕರ್ನಾಟಕದ ಜನರು, ಹೋರಾಟಗಾರರು ಶಾಸಕರ ಮೂಲಕ ತಮ್ಮ ಬೇಡಿಕೆಗಳ ಮನವಿ ಸಲ್ಲಿಸಬೇಕು. ಅದು ಸದನದಲ್ಲಿ ಚರ್ಚೆಯಾಗಿ ಸಮಸ್ಯೆಗೆ ಪರಿಹಾರ ದೊರೆಯಬೇಕು,'' ಎಂದರು.